41)	ನ್ಯಾಷನಲ್ ಕೇಬಲ್ ವೀಡಿಯೋ, ನಂ.607:ಎ, 5ನೇ ಮೈನ್, 2ನೇ ಬ್ಲಾಕ್, ಆರ್.ಟಿ.ನಗರ, ಬೆಂಗಳೂರು.	42)	ರಮ್ಯ ಕೇಬಲ್ ವೀಡಿಯೋ, ಕಾಮಾಕ್ಷಮ್ಮ ಲೇಔಟ್, ಓಲ್ಡ್ ಟೌನ್, ಯಲಹಂಕ, ಬೆಂಗಳೂರು.
43)	ಸವಿತಾ ಛಾನಲ್ಸ್, ಗಣೇಶ ದೇವಸ್ಥಾನದ ಹತ್ತಿರ, ನ್ಯೂಟೌನ್, ಯಲಹಂಕ, ಬೆಂಗಳೂರು.	44)	ಸಾಯಿ ಕೇಬಲ್ ಟಿವಿ, ಗಣೇಶ ದೇವಸ್ಥಾನದ ಹತ್ತಿರ, ನ್ಯೂಟೌನ್, ಯಲಹಂಕ.
45)	ಡಾಲ್ಫಿನ್ ಕೇಬಲ್ ವಿಷನ್, ನಂ.14, 12ನೇ ಕ್ರಾಸ್, ಜಯಮಹಲ್ ಬಡಾವಣೆ, ಬೆಂಗಳೂರು.	46)	ಚಾನಲ್ ಕೇಬಲ್ ಟಿವಿ, ನಂ.70, 1ನೇ ಕ್ರಾಸ್, ರಾಮಯ್ಯ ರೆಡ್ಡಿ ಲೇಔಟ್, ಬೆಂಗಳೂರು-46.
47)	ವಿಜಯ ವಿಷನ್ ವೀಡಿಯೋ, ನಂ.63:5, ವೆಂಕಟೇಶ್ವರ ನಾಗಶೊಟ್ಟಿಹಳ್ಳಿ, ಬೆಂಗಳೂರು.	48)	ಸ್ಟಾರ್ ಕೇಬಲ್ ವಿಷನ್ ಎಂಟರ್ಪ್ರೈಸಸ್, ನಂ.ಜಿ, ಜಿನೇ ಕ್ರಾಸ್, ಕೆ.ಎನ್. ಬಡಾವಣೆ, ಯಶವಂತಪುರ, ಬೆಂಗಳೂರು.
49)	ಶಾರ್ಪ್ ವೀಡ್ಯೋ ಕೇಬಲ್ ಸಿಸ್ಟಮ್, ಹೆಚ್.ಎಂ.ಟಿ.ಮೈನ್ ರಸ್ತೆ, ಮತ್ತಿಕೆರೆ, ಬಸ್ ನಿಲ್ದಾಣ, ಯಶವಂತಪುರ, ಬೆಂಗಳೂರು.	50)	ವಿಜಯ ಕೇಬಲ್ ಸೆಂಟರ್, ನಂ.43:3: 4ನೇ ಮೈನ್, ಮತ್ತಿಕೆರೆ ಬಡಾವಣೆ, ಯಶವಂತಪುರ, ಬೆಂಗಳೂರು.
51)	ಗೋಕುಲ ಕೇಬಲ್ ಟಿ.ವಿ. ವೀಡಿಯೋ, ನಂ.122, 3ನೇ ಕ್ರಾಸ್, ಹೆಚ್.ಎಂ.ಟಿ. ಲೇಔಟ್, ಬೆಂಗಳೂರು.	52)	ಸೆಪ್ಟ್ ಕಂ ಟಿಲಿಕೇಬಲ್, ನಂ.107, 13ನೇ ಮೈನ್ ರೋಡ್, ಗೋಕುಲ 1ನೇ ಸ್ಟೇಜ್, ಬೆಂಗಳೂರು.

ದಕ್ಷಿಣ ಕನ್ನಡ ಜಿಲ್ಲೆಯ ತಣ್ಣೀರು ಬಾವಿಯಲ್ಲಿ ಯೂತ್ ಹಾಸ್ಟೆಲ್ ನಿರ್ಮಿಸುವುದರ ಬಗ್ಗೆ

812 - ಶ್ರೀ ವಿಜಯಕುಮಾರ ಶೆಟ್ಟಿ (ಸುರತ್ಕಲ್) : ಮಾನ್ಯ ಯುವಜನ ಸೇವಾ ಕ್ರೀಡಾ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ದಕ್ಷಿಣ ಕನ್ನಡ ಜಿಲ್ಲೆಯ ತಣ್ಣೀರು ಭಾವಿಯಲ್ಲಿ ಕೇಂದ್ರ ಸರ್ಕಾರದ ನೆರವಿನೊಡನೆ ಯೂತ್ ಹಾಸ್ಟಲ್ ನಿರ್ಮಿಸುವ ಸರ್ಕಾರದ ಯೋಜನೆ ಯಾವ ಹಂತದಲ್ಲಿದೆ?*

ಆ) *ಇದಕ್ಕಾಗಿ ಸರ್ಕಾರ ಖರ್ಚು ಮಾಡಿರುವ ಅಂದಾಜು ವೆಚ್ಚವೆಷ್ಟು?*

ಶ್ರೀ ಎಸ್. ರಮೇಶ (ವಾರ್ತ ಪ್ರಸೋದ್ಯಮ ಮತ್ತು ಯುವಜನ ಸೇವಾ ಸಚಿವರು)

ಅ) ಪರಿಶೀಲನೆಯಲ್ಲಿದೆ.

ಆ) ಇನ್ನೂ ಅಂದಾಜು ವೆಚ್ಚದ ವಿವರ ಸಿದ್ಧವಾಗಿರುವುದಿಲ್ಲ.

ಪೋಲೀಸ್ ಗುಪ್ತ ದಳದ ಬಗ್ಗೆ

819 - ಶ್ರೀ ಪಿ.ಜಿ.ಆರ್. ಸಿಂಧ್ಯ : (ಕನಕಪುರ) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಪೋಲೀಸ್ ಇಲಾಖೆಯ ಗುಪ್ತದಳದಲ್ಲಿ ವಿಚಾರಣೆ ಮಾಡುತ್ತಿರುವ ಮೊಕದ್ದಮೆಗಳ ಸಂಖ್ಯೆ ಎಷ್ಟು? (ಕಳೆದ 3 ವರ್ಷಗಳ ಅಂಕಿಅಂಶಗಳನ್ನು ಕೊಡುವುದು)

ಆ) ವಿಚಾರಣೆಗಳು ತಡವಾಗುತ್ತಿರುವುದು ಗಮನಕ್ಕೆ ಬಂದಿದೆಯೇ?

ಶ್ರೀ ಧರ್ಮಸಿಂಗ್ (ಗೃಹ ಸಚಿವರು)

ಅ) 1988 : ತನಿಖೆಯಲ್ಲಿರುವ ಪ್ರಕರಣಗಳು- 652

ವಿಚಾರಣೆಯಲ್ಲಿರುವ ಪ್ರಕರಣಗಳು-99

1989 : ತನ್ನಿಖೆಯಲ್ಲಿರುವ ಪ್ರಕರಣಗಳು - 973

ವಿಚಾರಣೆಯಲ್ಲಿರುವ ಪ್ರಕರಣಗಳು - 62

1990 : ತನಿಖೆಯಲ್ಲಿರುವ ಪ್ರಕರಣಗಳು -780

ವಿಚಾರಣೆಯಲ್ಲಿರುವ ಪ್ರಕರಣಗಳು - 80

ಆ) ಹೌದು, ಈ ಕೆಳಕಂಡ ಕಾರಣಗಳಿಂದಾಗಿ ತನಿಖೆಯಲ್ಲಿರುವ ಮತ್ತು ವಿಚಾರಣೆಯಲ್ಲಿರುವ ಪ್ರಕರಣಗಳು ತಡವಾಗುತ್ತಿವೆ.

1)ಪ್ರತಿ ವರ್ಷದ ಹೆಚ್ಚು ಹೆಚ್ಚು ಕೇಸುಗಳನ್ನು ಸಿ.ಒ.ಡಿ. ತನಿಖೆಗೆ ವಹಿಸುತ್ತಿರುವುದು.

2) ಕ್ಲಿಷ್ಟಕರವಾದ ಹಾಗೂ ಸ್ವಾಭಾವತಃ ಅತಿ ಮುಖ್ಯವಾದ ಪ್ರಕರಣಗಳನ್ನು ಸಿ.ಒ.ಡಿ.ಗೆ ವಹಿಸುತ್ತಿದ್ದು ಅವುಗಳ ತನಿಖೆ ಹಾಗೂ ವಿಚಾರಣೆಗೆ ದೀರ್ಘಕಾಲ ತೆಗೆದುಕೊಳ್ಳುತ್ತದೆ. ಸಿ.ಒ.ಡಿ.ಯ ತನಿಖಾಧಿಕಾರಿಗಳು ತನಿಖೆಗಾಗಿ ರಾಜ್ಯದ ಮೂಲೆ ಮೂಲೆಗೂ ಹಾಗೂ ಹೊರರಾಜ್ಯಗಳಿಗೂ ಹೋಗಬೇಕಾಗುತ್ತದೆ. ಹೊರದೇಶದವರೆಗೂ ಪೋಲೀಸ್ ಇಲಾಖೆಯ ಸಂಪರ್ಕವನ್ನು ಇಟ್ಟಿಕೊಳ್ಳಬೇಕಾಗುತ್ತದೆ.

3) ಹೆಚ್ಚು ಪ್ರಕರಣಗಳನ್ನು ವಿಲೇವಾರಿ ಮಾಡಲು ವಿಧಿವಿಧಾನ ಪ್ರಯೋಗಾಲಯ, ಬೆರಳಚ್ಚು ತಜ್ಞರು ಹಾಗೂ ವೈದ್ಯರುಗಳ ಅಭಿಪ್ರಾಯ ಪಡೆಯಬೇಕಾಗುತ್ತದೆ.

4) 1990ನೇ ಇಸವಿಯ ಕೊನೆಯ ಭಾಗದಲ್ಲಿ ರಾಜ್ಯದಲ್ಲಿ ಕೋಮು ಗಲಭೆಯಿಂದ ದಾಖಲಾದ ಕೂನಿ ಮತ್ತು ಇತರೆ ಕೇಸುಗಳು ಸಿ.ಒ.ಡಿ.ಯ ತನಿಖೆಗೆ ವಹಿಸಿದ್ದು, ಅವುಗಳನ್ನು ತ್ವರಿತ ಗತಿಯಲ್ಲಿ ತನಿಖೆ ಮಾಡಿ ಮುಗಿಸಿರುವ ಕಾರಣ ಇತರೆ ಪ್ರಕರಣಗಳು ಉಳಿದುಕೊಳ್ಳಲು ಅವಕಾಶವಾಯಿತು.

5)ಪ್ರಮುಖ ವ್ಯಕ್ತಿಗಳು ಭೇಟಿ ಕೊಟ್ಟಾಗ ಕಾನೂನು ಮತ್ತು ಸುವ್ಯವಸ್ಥೆ ಕಾಪಾಡುವ ಸಲುವಾಗಿ ಹಾಗೂ ಗಲಭೆ ಪೀಡಿತ ಪ್ರದೇಶಗಳಿಗೆ ಅಧಿಕಾರಗಳನ್ನು ನಿಯೋಜಿಸುವುದು.

6) ಅಪರಾಧ ಮತ್ತು ಅಪರಾಧಗಳ ಬಗ್ಗೆ ಗುಪ್ತ ಮಾಹಿತಿಯನ್ನು ನಿರ್ವಹಿಸುವ ಕಾರ್ಯ ಇತರ ಜಿಲ್ಲೆಯ ಪೋಲೀಸರಿಗೆ ಇದರ ಬಗ್ಗೆ ಮಾಹಿತಿಯನ್ನು ಕೊಡುವುದು.

7)ವರ್ಗಾವಣೆಯಾದಾಗ ಮತ್ತು ನಿವೃತ್ತಿಯಿಂದಾಗಿ ತೆರವಾದ ಸ್ಥಳಗಳಿಗೆ ಅಧಿಕಾರಿಗಳನ್ನು ಭರ್ತಿ ಮಾಡುವಲ್ಲಿ ಕೆಲವು ವೇಳೆ ವಿಳಂಬವಾಗುತ್ತಿರುವುದು.

8) ಕಾಫಿಪೋಸಾ ಕಾಯಿದೆ ಮತ್ತು ಇತರೆ ಅಪರಾಧಿಗಳನ್ನು ನಿಯಂತ್ರಿಸುವ ಕರ್ತವ್ಯಗಳನ್ನು ನಿರ್ವಹಿಸಬೇಕಾಗುವುದು.

9) ಸಮನ್ಸ್ ಜಾರಿ ಮತ್ತು ವರದಿಗಳನ್ನು ಜಾರಿ ಮಾಡುವ ಕಾರ್ಯ.

10) ಅಧಿಕಾರಿಗಳು ತಾವು ಮೊದಲು ಕಾರ್ಯ ನಿರ್ವಹಿಸಿದ ಸ್ಥಳಗಳಲ್ಲಿ ಪ್ರಕರಣಗಳನ್ನು ತನಿಖೆ ಮಾಡಿದ್ದು ಆ ಪ್ರಕರಣಗಳ ಸಾಕ್ಷಿಗಾಗಿ ಕೋರ್ಟಿಗೆ ಹೋಗಿಬರುವುದು.

ಅಂಗವಿಕಲರ ಬಗ್ಗೆ

821- ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ) : ಮಾನ್ಯ ಕಾನೂನು ಮತ್ತು ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟಿ ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಅಂಗವಿಕಲರ ಗಣತಿಯನ್ನು ಮಾಡಲಾಗಿದೆಯೇ

ಆ) ಹಾಗಿದ್ದಲ್ಲಿ ಯಾವಾಗ ಮಾಡಲಾಗಿದೆ ಹಾಗೂ ಅವರುಗಳ ಸಂಖ್ಯೆ ಎಷ್ಟು?

ಇ) ಅಂಗವಿಕಲರುಗಳಿಗಾಗಿ ಕೊಡುತ್ತಿರುವ ಪರಿಹಾರಧನ ಎಷ್ಟು ಹಾಗೂ ಇತರೆ ಸೌಲಭ್ಯಗಳೇನು?

ಈ) ಇವುಗಳ ವಿತರಣೆ ಸರಿಯಾಗಿ ಆಗುತ್ತಿದೆಯೇ?

ಶ್ರೀ ಬಿ. ಶಿವಣ್ಣ (ಕಾನೂನು ಮತ್ತು ಸಮಾಜ ಕಲ್ಯಾಣ ಮಂತ್ರಿಗಳು)

ಅ) ಇಲ್ಲ. ಆದರೆ ಈ ಸಾಲಿನಲ್ಲಿ ನಾಲ್ಕು ಆಯ್ದ ಜಿಲ್ಲೆಗಳಲ್ಲಿ ಅಂದರೆ ಚಿತ್ರದುರ್ಗ, ಗುಲ್ಬರ್ಗ, ಧಾರವಾಡ ಮತ್ತು ಮಂಗಳೂರು ಈ ಜಿಲ್ಲೆಗಳಲ್ಲಿ ಬಾಲವಿಕಾಸ ಯೋಜನೆ ಇರುವಲ್ಲಿ ಸಮೀಕ್ಷೆಯನ್ನು ಈ ವರ್ಷದಲ್ಲಿ ಕೈಗೊಳ್ಳಲಾಗುತ್ತಿದೆ.

ಆ) ಗಣತಿ ಕಾರ್ಯ ಇನ್ನೂ ಪೂರ್ಣಗೊಂಡಿಲ್ಲವಾದ ಸಂಖ್ಯೆ ಎಷ್ಟೊಂದು ಲಭ್ಯವಿಲ್ಲ.

ಇ) ಯಾವುದೇ ಪರಿಹಾರ ಧನ ನೀಡುವ ಯೋಜನೆಗಳಿರುವುದಿಲ್ಲ ಆದರೆ ಇತರೇ ಸೌಲಭ್ಯಗಳ ಯೋಜನೆಗಳ ಪಟ್ಟಿಯನ್ನು ಲಗತ್ತಿಸಿದೆ.

ಈ) ಹೌದು.

ಅನುಬಂಧ

1. ಶೈಕ್ಷಣಿಕ ಕಾರ್ಯಕ್ರಮಗಳು

ಅ) ಅಂಧ ಮಕ್ಕಳ ವಸತಿ ಶಾಲೆಗಳು

ಆ) ಬ್ರೈಲ್ ಮುದ್ರಣಾಲಯ

ಇ) ರೆಸಿಡೆನ್ಸಿಯಲ್ ಸ್ಕೂಲ್ ಫಾರ್ ದಿ ಡೆಫ್ ಚಿಲ್ಡ್ರನ್ಸ್

ಈ) ಅಂಗವಿಕಲರಿಗಾಗಿ ಮೆಟ್ರಿಕ್ ನಂತರದ ಶಿಕ್ಷಣ

ಉ) ಸಮನ್ವಯ ಶಿಕ್ಷಣ

ಊ) ವಿದ್ಯಾರ್ಥಿ ವೇತನ

2. ಉದ್ಯೋಗ ಮತ್ತು ತರಬೇತಿ

ಅ) ಉದ್ಯೋಗದಲ್ಲಿ ಮೀಸಲಾತಿ.

ಆ) ವಿಶೇಷ ಉದ್ಯೋಗ ವಿನಿಮಯ ಕೇಂದ್ರ

ಇ) ಸ್ವಯಂ ಉದ್ಯೋಗಕ್ಕಾಗಿ ಆರ್ಥಿಕ ನೆರವು

3. ಅಂಗವಿಕಲರ ಪುನರ್ವಸತಿ ಕಾರ್ಯಕ್ರಮಗಳು

ಅ) ಜಿಲ್ಲಾ ಪುನರ್ವಸತಿ ಕೇಂದ್ರ, ಮೈಸೂರು

ಆ) ದೈಹಿಕ ಅಂಗವಿಕಲರಿಗೆ ಕೃತಕ ಅಂಗಾಂಗಳು